# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ತಿಂಗಳ ಪ್ರಾರಂಭದಲ್ಲಿ ಕಾರ್ಯಸಿದ್ಧಿ. ಬಂಧುಗಳ ಆಗಮನದಿಂದ ಕುಟುಂಬದಲ್ಲಿ ಸಂತಸ. ಮನೆ ಬಾಡಿಗೆಯಿಂದ ಧನಲಾಭ. ಸ್ವತಂತ್ರ ಉದ್ಯೋಗಸ್ಥರಿಗೆ ಲಾಭ. ದೂರ ಪ್ರಯಾಣ. ಗ್ರಂಥರಚನೆಯಲ್ಲಿ ಆಸಕ್ತಿ. ವಾಹನ ಸೌಖ್ಯ. ಮಕ್ಕಳಿಂದ ಕಿರಿಕಿರಿ. ಬರತಕ್ಕ ಬಾಕಿ ಬರುವುದು. ಶುಭ: 06,18,22 ಅಶುಭ: 10,14,28.



**ವೃಷಭ:** ಸಹೋದರಿಯರಿಂದ ಶುಭವಾರ್ತೆ. ಗೃಹಾಲಂಕಾರ ವಸ್ತು ಖರಿದಿ. ಉದ್ಯಮಿಗಳಿಗೆ ಹೊಸ ಯೋಜನೆ ಪ್ರಾರಂಭಿಸಲು ಸಕಾಲ. ತಿಂಗಳ ಮಧ್ಯದಲ್ಲಿ ಜ್ವರ ಪೀಡೆ ವೈದ್ಯಕೀಯ ಖರ್ಚು. ಕೋರ್ಟ್ ಪ್ರಕರಣದಲ್ಲಿ ಗೆಲುವು ಅವಮಾನಕರ ಪ್ರಸಂಗ. ವಿವಾಹ ಪ್ರಸ್ತಾವದಲ್ಲಿ ಯಶಸ್ಸು. ಶುಭ: 12,19,21 ಅಶುಭ: 11,20,25.



**ಮಿಥುನ:** ದೈಹಿಕ ಜಾಡ್ಯ, ಅಲರ್ಜಿ. ವಿನಾಕಾರಣ ಹೆದರಿಕೆ. ಆದರೆ ಬಹುದಿನಗಳ ನಂತರ ಕುಟುಂಬದಲ್ಲಿ ಸಂತೋಷದ ಸಮಾರಂಭ. ಕಲಾವಿದರು ಮತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶಸ್ಸು. ಉತ್ತಮ ವಾಗ್ಝರಿ ಪ್ರದರ್ಶನ. ಮಾನ ಸನ್ಮಾನ. ಮೂತ್ರ ಜನಕಾಂಗ ಪೀಡೆ ಸಾಧ್ಯತೆ. ಶುಭ: 4,19,25 ಅಶುಭ: 12,17,21.



**ಕರ್ಕ:** ಮನೆಕಟ್ಟುವ ಸಮಸ್ಯೆ ಬಗೆಹರಿಯುವುದು. ಕ್ರಯ ವಿಕ್ರಯದಲ್ಲಿ ವಂಚನೆ ನಡೆಯುವ ಸಂಭವ, ಜಾಗ್ರತೆ. ತಿಂಗಳಿಡೀ ಒಂದಿಲ್ಲೊಂದು ವಿವಾದದಲ್ಲಿ ಸಿಲುಕುವಿರಿ. ತಂದೆಯಿಂದ ಹಣಕಾಸಿನ ಸಹಾಯ ಸಾಧ್ಯತೆ. ಕಾಲಿಗೆ ನೋವು. ಆಸ್ಪತ್ರೆ ಖರ್ಚು. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶುಭ. 08,17,23. ಅಶುಭ. 12,18,26.



**ಸಿಂಹ:** ಉತ್ಸಾಹ ವೃದ್ಧಿಸುವುದು. ಸರಕಾರಿ ಕೆಲಸಗಳು ತ್ವರಿತ ಗತಿಯಲ್ಲಿ ನಡೆಯುವವು. ಪರಿಚಿತ ವ್ಯಕ್ತಿಗಳಿಂದ ವಿರೋಧ ಕಾಣಿಸುವುದು. ಪಶುಗಳ ವಿಕ್ರಯದಾರರಿಗೆ ಲಾಭ. ಹೊಟ್ಟೆನೋವು. ಅಜ್ಞಾತವಾಸದಿಂದ ಬಿಡುಗಡೆ. ಮಹತ್ವದ ಮಾತುಕತೆ. ಸರಕಾರಿ ಪರೀಕ್ಷೆಗಳಲ್ಲಿ ಯಶಸ್ಸು. ಶುಭ: 14,18,23 ಅಶುಭ: 12,16,25.



**ಕನ್ಯಾ:** ವಿಶೇಷ ಸಾಲಗಳು ತೀರುವವು. ತಿಂಗಳ ಮಧ್ಯದಲ್ಲಿ ಅನಿರೀಕ್ಷಿತ ಖರ್ಚಿನ ಪ್ರಸಂಗ. ಸ್ವಂತ ಉದ್ಯೋಗಸ್ಥರಿಗೆ ಉತ್ತಮ ಲಾಭ. ಸರಕಾರಿ ಕೆಲಸದಲ್ಲಿ ವ್ಯತ್ಯಯ. ಸೇವಕರಿಂದ ಹಾನಿ, ತೊಂದರೆ. ಬಂಧುಗಳಿಗೆ ಆಪತ್ತು. ಮನೆಕೆಲಸ ಅರ್ಧಕ್ಕೆ ನಿಲ್ಲುವುದು. ಪ್ರೇಮ ವೈಫಲ್ಯ. ಅಧಿಕಾರಿಗಳಿಗೆ ಹಿನ್ನಡೆ. ಶುಭ: 11,15,27 ಅಶುಭ: 12,21,28.



**ತುಲಾ:** ಉತ್ತಮ ಫಲ ಪ್ರಾಪ್ತಿ. ಆಕಸ್ಮಿಕ ಧನಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವುದು. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ವಿವಾಹಾಪೇಕ್ಷಿಗಳಿಗೆ ಸಂಗಾತಿ ಲಭ್ಯ. ಹಳೆಯ ವ್ಯಾಧಿಗಳು ಮರುಕಳಿಸುವ ಸಾಧ್ಯತೆ ಇದೆ. ಆಹಾರದ ಬಗ್ಗೆ ಎಚ್ಚರವಿರಲಿ. ಶುಭ: 10,14,21 ಅಶುಭ: 16,19,27.



**ವೃಶ್ಚಿಕ:** ಕಷ್ಟದಲ್ಲೂ ಇಷ್ಟ ಫಲ ಪ್ರಾಪ್ತಿಯಾಗುವುದು. ಆರ್ಥಿಕ ವಿಷಯಗಳಲ್ಲಿ ಎಚ್ಚರಿಕೆಯಿಂದ ಇರಿ. ರಾಜಕಾರಣದಿಂದ ಮಾನಹಾನಿ ಸಂಭವ. ಪರದೇಶ ಪ್ರವಾಸಕ್ಕೆ ಸಿದ್ಧತೆ ನಡೆಯುವುದು. ಸರಕಾರಿ ಅಧಿಕಾರ ಪ್ರಾಪ್ತಿಯೋಗ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಶುಭ:16,18,20 ಅಶುಭ: 12,21,27.



**ಧನು:** ಆರೋಗ್ಯದಲ್ಲಿ ಏರುಪೇರು. ಸಂಗಾತಿಯೊಡನೆ ಜಗಳ. ಕಚೇರಿ ಕಾಗದ ಪತ್ರಗಳು ಹಟಾತ್ ಕಾಣೆಯಾಗುವಿಕೆ. ದೂರದಿಂದ ಶುಭವಾರ್ತೆ ಬರುವುದು. ದೈನಂದಿನ ಕೆಲಸಗಳು ಸರಾಗ. ದಿಢೀರ್ ಹಿರಿಯ ಅಧಿಕಾರಿಗಳ ಆಗಮನ. ಸ್ತ್ರೀ ಮೂಲಕ ದ್ರವ್ಯ ಲಾಭ. ದೇವತಾ ಪೂಜೆ. ಶುಭ: 12,16,21 ಅಶುಭ: 17,22,28.



**ಮಕರ:** ವಾಹನ ಚಲಾಯಿಸುವಾಗ ಎಚ್ಚರಿಕೆ ಇರಲಿ. ಕಾಲು ನೋವಿನ ಸಮಸ್ಯೆ. ಕೌಟುಂಬಿಕ ಖರ್ಚು ಜಾಸ್ತಿಯಾಗುವುದು. ಶತ್ರುಗಳು ತಲೆ ತಗ್ಗಿಸುವರು. ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ. ಮನೆಯಲ್ಲಿ ವಿಶೇಷ ಸಮಾರಂಭ ನಡೆಯುವುದು. ದಾಂಪತ್ಯ ಸೌಖ್ಯ. ಶುಭ:14,16,19 ಅಶುಭ: 15,17,28



**ಕುಂಭ:** ಶುಭಯೋಗ. ಯಾಂತ್ರಿಕ ವಸ್ತುಗಳ ಖರೀದಿ. ಶೈಕ್ಷಣಿಕ ಖಾತೆಯಲ್ಲಿ ಕೆಲಸದಲ್ಲಿರುವವರಿಗೆ ತಾತ್ಕಾಲಿಕ ಬಡ್ತಿ. ಬ್ಯಾಂಕ್ ನೌಕರರಿಗೆ ವರ್ಗಾವಣೆ ಸಂಭವ. ಕೈಗೊಂಡ ಕೆಲಸಗಳಲ್ಲಿ ನೀರಿಕ್ಷೆಗಿಂತ ಲಾಭ. ಗುತ್ತಿಗೆದಾರರಿಗೆ ಉತ್ತಮ ಧನ ಲಾಭ ಸಂಭವ. ಮಿತ್ರರಿಂದ ವಂಚನೆ ಸಂಭವ. ಶುಭ 13,19,20 ಅಶುಭ: 14,16,25.



**ಮೀನ:** ವಿನಾಕಾರಣ ಮಿತ್ರರು ಶತ್ರುಗಳಾವುರು. ಮೇಲಧಿಕಾರಿಗಳಿಂದ ಎಚ್ಚರಿಕೆ ನೋಟಿಸು ಬರಬಹುದು. ಕಲಾವಿದರಿಗೆ ಸಂಗೀತಗಾರರಿಗೆ ತಿಂಗಳ ಮೊದಲರ್ಧ ಉತ್ತಮ. ಸೊಂಟನೋವು ಕಾಣಿಸುವುದು. ಮಕ್ಕಳ ಆರೋಗ್ಯದಲ್ಲಿ ಪ್ರಗತಿ. ವಿದ್ಯಾರ್ಥಿಗಳಿಗೆ ಹಿನ್ನಡೆ. ಕುಟುಂಬ ಸೌಖ್ಯ. ಶುಭ: 04,10,22 ಅಶುಭ: 14,20,27.